# ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್

**ವಿಷಯ: ಪ್ರಾತ್ಯಕ್ಷಿಕ ಮೌಲ್ಯಮಾಪನ(Acturial Valuation) ಆಧಾರದ ಮೇಲೆ ಕವಿಪ್ರನಿನಿ ಮತ್ತು ವಿಸಕಂಗಳು ಎನ್‌ಡಿಸಿಪಿಎಸ್ ವ್ಯಾಪ್ತಿಗೆ ಒಳಪಡುವ ನೌಕರರ ಕುಟುಂಬ ಪಿಂಚಣಿಯ ವಂತಿಗೆಯನ್ನು ಪಾವತಿಸುವ ಕುರಿತು.**

ಓದಲಾಗಿದೆ:

| | |
|---|---|
| 1 | ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಜಿ16/ಜಿ14/4977/2005-06, ದಿನಾಂಕ:05.07.2007 |
| 2 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಜಿ16/ಕೆಇಎನ್‌ಡಿಸಿಪಿಎಸ್/ಜಿ93/36012/2018-19, ದಿನಾಂಕ: 19.07.2019 |
| 3 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಜಿ16/ಕೆಇಎನ್‌ಡಿಸಿಪಿಎಸ್/ಜಿ93/36012/2020-21, ದಿನಾಂಕ: 25.11.2020 |
| 4 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಜಿ16/ಕೆಇಎನ್‌ಡಿಸಿಪಿಎಸ್/ಜಿ93/36012/2020-21, ದಿನಾಂಕ: 25.11.2020 |
| 5 | M/s Armstrong International Consultants, Coimbatoreರವರ ವರದಿಗಳ ದಿನಾಂಕ:02.08.2022 |

ಪ್ರಸ್ತಾವನೆ:

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿ ಇ ಎನ್ 2018, ದಿನಾಂಕ:23.06.2018ನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವ ದೃಷ್ಟಿಯಿಂದ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ನೌಕರರು ಮತ್ತು ನೌಕರರ ಅವಲಂಬಿತರಿಗೆ ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ನಿವೃತ್ತಿ/ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ.

2. ದಿನಾಂಕ:01.04.2006ರಂದು ಅಥವಾ ನಂತರ ಸೇವೆಗೆ ಸೇರಿರುವ/ಸೇರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸೇವೆ ಸಲ್ಲಿಸಿದ ಎಲ್ಲಾ ಅಧಿಕಾರಿ/ನೌಕರರಿಗೆ ನಿವೃತ್ತಿ ಉಪದಾನ ಸೌಲಭ್ಯವನ್ನು ಹಾಗೂ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತ ಕುಟುಂಬಕ್ಕೆ ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿಯನ್ನು ಕೆಲವು ಷರತ್ತಿಗೊಳಪಟ್ಟು ಮೇಲೆ(3)ರಲ್ಲಿ ಓದಲಾದ ನಿಗಮದ ಆದೇಶದನುಸಾರ ದಿನಾಂಕ:01.04.2018ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿರುವುದನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

3. ಎನ್‌ಡಿಸಿಪಿಎಸ್ ನೌಕರರ ಉಪದಾನ ಮತ್ತು ಕುಟುಂಬ ಪಿಂಚಣಿ ಹೊಣೆಯನ್ನು (Liability) ಕಂಡು ಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ(Actuarial Valuation) ಮಾಡಿಸಿ, ಅನುಸರಿಸಬೇಕಾದ ಕ್ರಮಗಳನ್ನು ಮೇಲೆ (4) ರಲ್ಲಿ ಓದಲಾದ ನಿಗಮದ ಆದೇಶದಲ್ಲಿ ಈ ಕೆಳಗಿನಂತೆ ಅನುಮೋದಿಸಿದೆ.

   ಅ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಲ್ಲಿರುವಂತೆ ಮೂಲಧನ ನಿಧಿ (Corpus Fund) ಗಾಗಿ ಬೇಕಾದ ಮೊತ್ತ ಒಂದೇ ಗಂಟಿನಲ್ಲಿ/ಮುಂಗಡವಾಗಿ ಸ್ವೀಕರಿಸುವುದು.

   ಆ) ನಿಗಮ ಮತ್ತು ಎಸ್ಕಾಂಗಳಿಂದ ಸ್ವೀಕೃತವಾಗುವ ಉಪದಾನ ಮತ್ತು ಕುಟುಂಬ ಪಿಂಚಣಿಯ ವಾರ್ಷಿಕ ವಂತಿಗೆ ದರವನ್ನು ನಿಗದಿಗೊಳಿಸುವುದು.

   ಇ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಂದು ಪ್ರತಿ ಮಾಹೆಯ ವಂತಿಗೆ ಮೊತ್ತವನ್ನು ಸ್ವೀಕರಿಸುವುದು.

   ಈ) ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಪಾವತಿಗೆ ಸಂಬಂಧಿಸಿದಂತೆ, "Pay-as-you-go" ವಿಧಾನವನ್ನು ಅಳವಡಿಸಿಕೊಳ್ಳುವುದು.

4. 31.03.2018, 31.03.2019, 31.03.2020 ಮತ್ತು 31.03.2021ರ ಅಂತ್ಯಕ್ಕೆ ಇರುವಂತೆ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಪ್ರಾತ್ಯಕ್ಷಿಕ ಮೌಲ್ಯಮಾಪನ ಕಾರ್ಯವನ್ನು M/s Armstrong International Consultants, Coimbatore ರವರಿಗೆ ವಹಿಸಿದ್ದು, ದಿನಾಂಕ:02.08.2022ರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಗಳಲ್ಲಿ ದಿನಾಂಕ:01.04.2018ರಲ್ಲಿ ಇರಬೇಕಾದ ಪ್ರಾರಂಭಿಕ ಶಿಲ್ಕು ಹಾಗೂ 2018-19, 2019-20 & 2020-21ನೇ ಸಾಲಿನ ಕುಟುಂಬ ಪಿಂಚಣಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕ ಮೌಲ್ಯಮಾಪನ ಲೆಕ್ಕ ಫಲಿತಾಂಶವನ್ನು ಪ್ರಸ್ತುತ ಪಡಿಸಿರುತ್ತಾರೆ. ಪ್ರಾತ್ಯಕ್ಷಿಕ ಮೌಲ್ಯಮಾಪನಕ್ಕೆ ಸಂಬಂಧಿಸಿರುವ ವರ್ಷದಿಂದಲೇ ಕುಟುಂಬ ಪಿಂಚಣಿ ವಂತಿಗೆಯನ್ನು ಆಕರಿಸುವಂತೆ ಸೂಚಿಸಿರುತ್ತಾರೆ. ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ (ಉದಾಹರಣೆಗೆ:-31.03.2021ರ ಅಂತ್ಯಕ್ಕೆ) ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಮಾಹಿತಿಯನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸಿದರೂ ಸಹ ಸಾಮಾನ್ಯವಾಗಿ ವರದಿಯಲ್ಲಿ ಶಿಫಾರಸ್ಸು ಮಾಡಲಾದ ವಂತಿಗೆ ದರಗಳನ್ನು ಅದೇ ಆರ್ಥಿಕ ವರ್ಷದ ಆರಂಭದಿಂದಲೇ (ಉದಾಹರಣೆಗೆ:-01.04.2020ರಿಂದ) ಅನುಷ್ಠಾನಗೊಳಿಸುವ ಕ್ರಮವನ್ನು ಅನುಸರಿಸಲಾಗುತ್ತದೆ.